ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎಸ್. ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಇಷ್ಟು ಕಡಮೆ ಸಂಖ್ಯೆಯಲ್ಲಿ ತೇರ್ಗಡೆಯಾಗಿರುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಉತ್ತರ ಸರಿಯಾಗಿಲ್ಲದಿರುವುದೇ ಕಾರಣ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅದೊಂದೇ ಕಾರಣವೇ ಬೇರೆ ಕಾರಣಗಳೂ ಇವೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರೀಕ್ಷೆಯಲ್ಲಿ ಸರಿಯಾಗಿ ಉತ್ತರ ಬರೆಯದೇ ಇರುವುದು ಅದೊಂದೇ ಕಾರಣ, ಇನ್ನಾವ ಕಾರಣವೂ ಇರುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ವಿದ್ಯಾಭ್ಯಾಸ ಶಿಕ್ಷಣದಲ್ಲಿ S.S.L.C. ಪರೀಕ್ಷೆಗೆ ಸರಿಯಾದ ವಿದ್ಯಾಭ್ಯಾಸ ಸಲ್ಲುತ್ತಿಲ್ಲವೆಂದು ಹೇಳಬಹುದೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಸಮರ್ಪಕವಾಗಿ ಉತ್ತರ ಕೊಟ್ಟಿಲ್ಲವೆಂದು ಹೇಳಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ವಿದ್ಯಾರ್ಥಿಗಳು ಸರಿಯಾಗಿ ಉತ್ತರಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಓದಲಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಒಬ್ಬ ಹುಡುಗ ಇಂಟರ್‌ಮೀಡಿಯೆಟ್ ಮಾಡಿ, B.Sc. degree ಮಾಡುವುದಕ್ಕೆ ಅವನಿಗೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಎ.ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಎಚ್. ವ ಡಮೂಡಲಗಿರಿಗೌಡ.—ಇಷ್ಟು ಕಡಮೆ ಸಂಖ್ಯೆಯಲ್ಲಿ ಹುಡುಗರು ತೇರ್ಗಡೆಯಾಗುತ್ತಿದ್ದು ವಿದ್ಯಾರ್ಥಿಗಳಿಗೆ ಹೆಚ್ಚು ಹಣ ಖರ್ಚಾಗುತ್ತಿದ್ದರೆ ದೇಶಕ್ಕೇ ನಷ್ಟವಾದಂತಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಫೇಲ್ ಆಗುವುದು ಒಳ್ಳೆಯದಲ್ಲವೆಂದು ಮಾತ್ರ ನಾನು ಹೇಳಬಲ್ಲೆ.

Transfer of Municipal High Schools to Government control.

Q.—341. Sri S. SIDDAPPA (Magadi) :—

Will the Government be pleased to state :—

(*a*) whether they would take up the administration of all the Municipal High Schools in the State ;

(*b*) whether they would maintain them by obtaining grants from municipalities ?

A.—Sri A. G. RAMACHANDRA RAO (Minister for Law and Education) :—

(*a*) No.

(*b*) Does not arise in view of reply to (*a*) above.

ಶ್ರೀ ಎಸ್. ಸಿದ್ದಪ್ಪ.—ಈಗ ಮುನಿಸಿಪಲ್ ಹೈಸ್ಕೂಲುಗಳು ನಡೆಯುತ್ತಿರುವುದು ಅಷ್ಟು ಚೆನ್ನಾಗಿಲ್ಲವಾದ್ದರಿಂದ ಅವುಗಳನ್ನೂ ಸರ್ಕಾರದ ಆಡಳಿತದಲ್ಲಿ ಸೇರಿಸಿಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದ ನೀತಿ ಅದಲ್ಲ ; ಆ ರೀತಿ ಸರ್ಕಾರದ ಆಡಳಿತಕ್ಕೆ ವಹಿಸಿಕೊಳ್ಳುವುದು ಸೂಕ್ತವಲ್ಲವೆಂದು ತೀರ್ಮಾನಕ್ಕೆ ಬಂದಿದ್ದೇವೆ.

Sri A. BHEEMAPPA NAIK.—So far as Municipal High Schools are concerned, are they not under the supervision of the District Educational Officers ?

Sri A. G. RAMACHANDRA RAO.—Yes.

Sri A. BHEEMAPPA NAIK.—In all other respects, are not these High Schools adhering to the curricula of Government High Schools ?

Sri A. G. RAMACHANDRA RAO.—Yes.

Sri A. BHEEMAPPA NAIK.—Are the teachers in these Municipal High Schools inter-transferable ?

Sri A. G. RAMACHANDRA RAO.—Among the Municipal High Schools.

Sri A. BHEEMAPPA NAIK.—From Municipal High School to Government High School ?

Sri A. G. RAMACHANDRA RAO.—No, that is not possible.

Sri A. BHEEMAPPA NAIK.—Do they not possess the same qualifications as those teachers in Government High Schools ?

Mr. SPEAKER.—That was discussed in March during this very session.

Sri A. BHEEMAPPA NAIK.—If the municipality assures Government that the same amount that they are spending for the maintenance of the municipal high school will be given, would it not be in the better interests of these high schools that Government should take over the management ?

Sri A. G. RAMACHANDRA RAO.—If the same amount is assured, that will not be sufficient because high schools in municipalities are growing.

Sri A. BHEEMAPPA NAIK.—Even supposing that the Government can come to an understanding that a higher amount is necessary, if the municipality assures the Government that the same would be given, will

the Government be pleased to take over the administration ?

Sri A. G. RAMACHANDRA RAO.—It is a hypothetical question. When it comes up it will be considered.

Sri A. BHEEMAPPA NAIK.—Are there not sufficient Municipal High Schools and private schools taken over by Government and managed now ?

Sri A. G. RAMACHANDRA RAO.—I want notice for that.

Sri A. BHEEMAPPA NAIK.—Will the Government set up a Committee to consider this question threadbare and come to an understanding since these municipalities are feeling it very difficult to manage the high schools; will the Government consider this aspect of setting up a committee and examining the question threadbare ?

Sri A. G. RAMACHANDRA RAO.—Yes, we will consider.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಮುನಿಸಿಪಾಲಿಟಿಗಳು ಹೈಸ್ಕೂಲುಗಳನ್ನು ನಡೆಸುವ ಶಕ್ತಿಯಿಲ್ಲದೆ ಇದ್ದರೆ ಏನುಮಾಡುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರ ಹೇಳಿ ಆಯಿತು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಹೈಸ್ಕೂಲುಗಳಲ್ಲಿ ಒಂದೇ ವರ್ಷ ಫೇಲ್ ಆಗಿದ್ದವರೂ, ಹಾಗೆ ಒಂದು ಸಲ ಫೇಲ್ ಆಗಿದ್ದಾರೆಂಬ ಕಾರಣದಮೇಲೆ ಅವರನ್ನು ಸ್ಕೂಲಿಗೆ ಸೇರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಆ ರೀತಿ 60-80 ಜನರನ್ನು ಸೇರಿಸದೇ ಇರುವುದನ್ನು ತಮ್ಮಗಮನಕ್ಕೆ ತಂದರೆ ಈ ತೊಂದರೆಯನ್ನು ಪರಿಹರಿಸುತ್ತಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೇಕಾಯಿತೆಂದು ವಿಚಾರಮಾಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಸ್ಕೂಲನ್ನಲ್ಲಿ ಸ್ಥಳಸಾಲದೆಂದು ಹೇಳಿ ಹಾಗೆಮಾಡಿದ್ದರೆ ಸರಿಪಡಿಸುತ್ತೀರಾ!

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಬಿ.ಎಸ್.ಸಿ. ಟೆಕ್ಸ್‌ಟೈಲ್ಸ್ ಎಂಬ ಪರೀಕ್ಷೆಯಲ್ಲಿ 29 ಜನ, 30 ಜನ ತೇರ್ಗಡೆಯಾಗಿದ್ದಾರೆಂದು ಇಲ್ಲಿ ಕೊಟ್ಟಿದ್ದೀರಿ. ಇಷ್ಟು ಜನ ತೇರ್ಗಡೆಯಾಗಿರುವವರಲ್ಲಿ ಸರ್ಕಾರದವರು ಒಬ್ಬರಿಗಾದರೂ ಕೆಲಸ ಕೊಟ್ಟಿದ್ದಾರೆಯೇ ?

Sri A. G. RAMACHANDRA RAO.—He is going back to the previous question.

ಶ್ರೀ ಜಿ. ಬಸಪ್ಪ.—ಅನೇಕ ಮುನಿಸಿಪಲ್ ಹೈಸ್ಕೂಲುಗಳಲ್ಲಿ ಅಲ್ಲಿನ ನೌಕರರಿಗೆ ಎರಡು ಮೂರು ತಿಂಗಳಾದರೂ ಸಂಬಳಗಳು ದೊರೆಯುತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಅಧ್ಯಕ್ಷರು.—ಅದೆಲ್ಲ ಚರ್ಚೆಯಾಗಿದೆ. You all took about twenty minutes for discussing this subject on another occasion.

Grant of lands for cultivation in Hosadurga Taluk

Q.—133. Sri G. BASAPPA (Hosadurga).—

Will the Government be pleased to state :—

(*a*) the extent of Excise, Amrit Mahal, Forest, hullubanni kharab lands available for disposal in Hosadurga Taluk from 1947;

(*b*) the extent of land disposed of in each of these lands from 1947 to 1953 every year;

(*c*) the number of *dharkhast* applications received in each year from 1947 to 1953 for the grant of these lands and how many of them are sanctioned, rejected and pending?

A.—Sri KADIDAL MANJAPPA (Minister for Revenue and Public Works).—

(*a*)—

Sl. No.	*Kind*	*Extent* A.	g.
1	Excise kharab	3,757	15
2	Amrit Mahal	87 (1947)	10
3	Forest	No land has been surrendered from forests.	
4	Hullubanni kharab	38,198	29